ಅದನ್ನು ಮೆಲ್ಲಗೆ ಕೆಳಗಿಳಿಸಿ ಏನಿದೆ ಎಂದು ಮೊಬೈಲ್ ಟಾರ್ಚ್ ಅದರ ಮೇಲೆ ತಿರುಗಿಸಿ ನೋಡಲು ಅದರಲ್ಲಿ ಹೊಲಿಗೆ ವಸ್ತುಗಳ ನಡುವೆ ಕಂಡಿತ್ತು, ಮಾಯಣ್ಣನು ಹುಡುಕುತ್ತಿದ್ದ ನೇಲ್ ಕಟ್ಟರ್. ಮಾಯಣ್ಣ ಅದನ್ನೂ ಕೂಡ ಊಹಿಸಿದ್ದ. ಆ ವಸ್ತು ಕೆಳಗೇ ಪತ್ತೆಯಾಗಬೇಕೆಂದಿಲ್ಲ... ಸೆಣಸಾಟದಲ್ಲಿ ಅದನ್ನು ಎಸೆದಿರಲಿಕ್ಕೂ ಸಾಧ್ಯ, ಹಾಗಾಗಿ ಅದು ಎಲ್ಲಿ ಬೇಕಾದರೂ ಸಿಗಬಹುದೆಂದು. ಹಾಗೆ ಎಸೆಯಲ್ಪಟ್ಟ ಅದು ಅಕಸ್ಮಾತ್ತಾಗಿ ಹೋಗಿ ನೇರವಾಗಿ ಆ ಬಾಗಿಲೆತ್ತರದ ಅಟ್ಟಣಿಗೆ ಮೇಲಿದ್ದ ಆ ಪ್ಲಾಸ್ಟಿಕ್ ಬ್ರೆಡ್ ಬಾಕ್ಸಲ್ಲಿ ಬಿದ್ದಿತ್ತೇನೊ? ಅಷ್ಟೇ ಸಾಲದೆಂಬಂತೆ ಆ ಉಗುರು ಕತ್ತರಿಯ ಸಾಮಾನ್ಯವಾಗಿ ಮಡಚಲ್ಪಟ್ಟಿರುವಂತಹ, ಒಂದು ಚಿಕ್ಕ ಕತ್ತಿ ಹೊರತೆಗೆದಿತ್ತು ಮತ್ತು ಅದರ ತುದಿಯಲ್ಲಿ ಸ್ಪಷ್ಟವಾಗಿ ರಕ್ತದ ಕಲೆಯಿತ್ತು. ಅಲ್ಲದೆ ಒಳಮಡಿಚಿದ ಕ್ಯಾನ್ ಓಪನರ್‌ನ ತುದಿಯಲ್ಲೂ ಒಂದು ಕಡುಕೆಂಪು ರಕ್ತದ ಚುಕ್ಕೆಯಿದ್ದಂತಿತ್ತು. ಅಲ್ಲಿಗೆ ಅಮ್ಮುವಿನ ಅಂತಿಮ ಕ್ಷಣಗಳ ಹೋರಾಟ, ತದನಂತರದ ಅವಳ ಅವಸಾನದ ಸ್ಪಷ್ಟ ಹಾಗೂ ಸಂಪೂರ್ಣ ಚಿತ್ರಣ ಮಾಯಣ್ಣನಿಗೆ ದಕ್ಕಿತ್ತು.

ಬಹುಶಃ ಹಂತಕನು ತನಗೆ ಬೆನ್ನು ಹಾಕಿ ಸ್ಟೂಲ್ ಮೇಲೆ ಕುಳಿತು ನೇಲ್ ಕಟ್ಟರ್‌ನಿಂದ ಕಾಲುಗುರನ್ನು ಒಪ್ಪ ಮಾಡಿಕೊಳ್ಳುತ್ತಿದ್ದ ಅಮ್ಮುವಿನ ತಲೆಗೆ ಹಿಂದಿನಿಂದ ರಾಡ್ ಬೀಸಿದ್ದಾನೆ. ಅದೇ ಕ್ಷಣದಲ್ಲಿ ಹಿಂದಕ್ಕೆ ತಿರುಗಿದ್ದ ಅಮ್ಮುವಿಗೆ ಪೂರ್ತಿ ಹೊಡೆತ ಬೀಳದೆ, ಆ ಕಬ್ಬಿಣದ ರಾಡು ತಲೆಯ ಮೇಲಿಂದ ಜಾರಿ ಕಿವಿಯ ತನಕ ತರಚು ಗಾಯವಾಗಿದೆ. ಕೈಯಲ್ಲಿದ್ದ ಉಗುರು ಕತ್ತರಿಯನ್ನು ಹಿಡಿದು ಆತ್ಮರಕ್ಷಣೆಗೆ ಅಮ್ಮು ತಿರುಗಿ ಬಿದ್ದಿದ್ದಾಳೆ. ಆ ಸಮಯದಲ್ಲಿ ಬಹುಶಃ ಉಗುರು ಕತ್ತರಿಯ ತೆರೆದ ಸಣ್ಣ ಕತ್ತಿಯಿಂದ ಹಂತಕನಿಗೆ ಚುಚ್ಚಿರಲೂಬಹುದು. ಹಾಗೆ ಮಾಡುವಾಗ ಉಗುರು ಕತ್ತರಿಯ ಹಿಡಿಯಲಿದ್ದ ಕ್ಯಾನ್ ಓಪನರ್‌ನ ಮೊನಚಾದ ತುದಿಯು ಅಮ್ಮುವಿನ ಹೆಬ್ಬೆರಳ ತುದಿಯನ್ನು ಚುಚ್ಚಿರಬಹುದು. ಬಹುಶಃ ಪೋಸ್ಟ್‌ಮಾರ್ಟಂ ಮಾಡಿದ ಡಾಕ್ಟರ್ ಪರಮಶಿವಯ್ಯ ತಮ್ಮ ಮರಣೋತ್ತರ ವರದಿಯಲ್ಲಿ ಹೆಬ್ಬೆರಳ ತುದಿಯಲ್ಲಿ ದಬ್ಬಳದಂಥದ್ದೇನೊ ಚುಚ್ಚಿದ ಗಾಯ ಎಂದು ಉಲ್ಲೇಖಿಸಿರುವುದು ಇದೇ ಆಗಿರಬಹುದು. ಬಹುಶಃ ಆ ನಂತರ ಹಂತಕನ ಕೈ ಮೇಲಾಗಿ ಸತತ ಎರಡು ಬಾರಿ ಮುಂದಲೆಗೆ ಬಾರಿಸಿದ ನೇರ ಮಾರಣಾಂತಿಕ ಹೊಡೆತಗಳಿಗೆ ಅಮ್ಮು ಕುಸಿದು ಬೀಳುವಾಗ ಕೈಯಲ್ಲಿದ್ದ ನೇಲ್ ಕಟ್ಟರನ್ನು ಹಂತಕನ ಮುಖಕ್ಕೆ ಎಸೆದಿದ್ದಾಳೆ. ಅದು ಅವನನ್ನು ತಪ್ಪಿ ಹೋಗಿ ನೇರವಾಗಿ ಮುಂಬಾಗಿಲ ಮೇಲಿನ ಅಟ್ಟಣಿಗೆಯ ಮೇಲಿಟ್ಟಿದ್ದ ಬ್ರೆಡ್ ಬಾಕ್ಸಲ್ಲಿ ಬಿದ್ದಿದೆ. ಇತ್ತ ಅಂತಿಮ ಕ್ಷಣದಲ್ಲಿ ಮಕಾಡೆ ನೆಲಕ್ಕೆ ಕುಸಿದು ಬಿದ್ದ ಅಮ್ಮು ಅರ್ಧ ಸುತ್ತು ಹೊರಳಿ, ಈಗ ಅಂಗಾತವಾಗಿದ್ದಳು. ಬಹುಶಃ ಕೊನೆಯುಸಿರೆಳೆದಿರುವುದು ಹಂತಕನನ್ನು ನೋಟದಲ್ಲೇ ಹಿಂಬಾಲಿಸಿ, ಅವನು ಹೊಸಿಲು ದಾಟಿ ಹೋದ ನಂತರವೇ ಇರಬಹುದು. ಅಂತೂ ಕ್ಯಾಪ್ಟನ್ ಮುತ್ತಣ್ಣನ ಮಗಳು ಅಮೃತಾ ಮುತ್ತಣ್ಣ ಯಾನೆ ಅಮ್ಮು ಧೃತಿಗೆಡದೆ ಧೀರೋಚಿತವಾಗಿ ಕೊನೆಯ ಉಸಿರ ತನಕ ಸೆಣಸಾಡಿ ಅವಸಾನವಾಗಿದ್ದಳು.

ಬಹುಶಃ ಕೊಲೆಗೆ ಬಳಸಿದ ರಾಡಿನಷ್ಟೇ, ಈ ಉಗುರು ಕತ್ತರಿಯು ಒಂದು ಮುಖ್ಯವಾದ ಸಾಕ್ಷಿಯಾಗಿತ್ತು, ಏಕೆಂದರೆ ಈ ಉಗುರು ಕತ್ತರಿಯಲ್ಲಿ, ಕೊಲೆ ಮಾಡಿದವನು ಮತ್ತು ಕೊಲೆಯಾದವಳ ಇಬ್ಬರ ರಕ್ತದ ಕಲೆಯೂ ಇದೆ ಅನಿಸಿತ್ತು. ಬಹುಶಃ ಇವೆರಡೂ, ಈ ಕೊಲೆ ಪ್ರಕರಣದ ಅಂತಿಮ ಹಾಗೂ ನಿರ್ಣಾಯಕ ಸಾಕ್ಷಿ ಆಗಬಹುದೆನಿಸಿತ್ತು ಮಾಯಣ್ಣನಿಗೆ. ಈ ತನಿಖೆಯು ಶುರುವಾದ ತರುವಾಯ ಮೊದಲ ಬಾರಿಗೆ ಸ್ವಲ್ಪ ಸಾಫಲ್ಯದ ಭಾವದಲ್ಲಿ, ನಿರಾಳವಾದಂತೆ ನಿಟ್ಟುಸಿರು ಬಿಟ್ಟಿದ್ದ ಮಾಯಣ್ಣ. ಅಷ್ಟರಲ್ಲಿ ಹೊರಗೆ ಯಾರೊ ಓಡಾಡಿದ ಹೆಜ್ಜೆಯ ಸಪ್ಪಳವಾಗಿತ್ತು. ತಕ್ಷಣ ಆ ಉಗುರು ಕತ್ತರಿಯಿದ್ದ ಬ್ರೆಡ್ ಬಾಕ್ಸನ್ನು ಅದೇ ಜಾಗದಲ್ಲಿ ಇರಿಸಿ ಹೊರಬಂದು ಬಾಗಿಲಿಗೆ ಬೀಗ ಜಡಿದು ಅತ್ತಿತ್ತ ನೋಡಲು ಯಾರೂ ಕಂಡಿರಲಿಲ್ಲ. ಸುತ್ತಲಿನ ತೀರಾ ಮಂದ ಬೆಳಕಿನ ಕಾರಣ ಏನೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ತಕ್ಷಣ ತನ್ನ ಮೊಬೈಲ್ ಟಾರ್ಚ್ ಆರಿಸಿ, ಮಕಾಡೆ ಮಲಗಿ ನೆಲದಲ್ಲಿ ತೆವಳುತ್ತಾ ತಾರಸಿಯ ಮುಂಭಾಗದ ಅಂಚಿಗೆ ಬಂದು ಹಾಗೆ ನಿಶ್ಚಲವಾಗಿ ಮೂಲೆಯಲ್ಲಿ ಕುಳಿತನು ಮಾಯಣ್ಣ. ಸುತ್ತಲೂ ನಿಧಾನವಾಗಿ ತಿರುಗುತ್ತಾ ಕಣ್ಣಾಯಿಸುತ್ತಿರಲು, ಎದುರಿಗಿನ ದೃಶ್ಯ ಅವನನ್ನು ಸ್ತಬ್ಧಗೊಳಿಸಿತ್ತು.

ಅಮ್ಮು ಮನೆಯ ಹಿಂದಿನ ದಿನೇಶನ ಮನೆ ಕೋಣೆಯಿಂದ, ಉದ್ದನೆಯ ಹೆಣೆಯದೆ ಹರಡಿ ಬಿಟ್ಟ ಕೂದಲು, ಇಳಿಬಿಟ್ಟ ಎರಡೂ ಕೈಗಳು, ಮೇಲಿಂದ ಕೆಳಗಿನ ತನಕ ಕಪ್ಪು ನಿಲುವಂಗಿಯ ದಿರಿಸು ತೊಟ್ಟ ಆಕೃತಿಯೊಂದು ತನ್ನನ್ನೇ ಎವೆಯಿಕ್ಕದೆ ನಿಟ್ಟಿಸುತಿತ್ತು. ಆ ಕೋಣೆಗೆ ಇನ್ನೂ ಕಿಟಕಿ ಮಡುಗಿಲ್ಲವಾದ್ದರಿಂದಾಗಿ ಮತ್ತು ಆಕೃತಿಯ ಹಿಂದಿನ, ಬಿಳಿ ಸುಣ್ಣದ ಗಾರೆಗೋಡೆಯ ಹಿನ್ನೆಲೆಯಲ್ಲಿ ಈ ಕಪ್ಪು ಆಕೃತಿ ಸ್ಪಷ್ಟವಾಗಿ ಕಾಣುತ್ತಿತ್ತು. ಮಾಯಣ್ಣ ನಿಧಾನವಾಗಿ ತನ್ನ ರಿವಾಲ್ವರ್ ತೆಗೆದು ಆ ಆಕೃತಿಯ ಕಡೆಗೆ ಗುರಿ ಹಿಡಿದಿದ್ದ. ಆದರೆ ಆ ಆಕೃತಿಯು ಸ್ವಲ್ಪವೂ ಕದಲದೆ ಹಾಗೆ ಮಾಯಣ್ಣನನ್ನು ನಿಟ್ಟಿಸುತ್ತಾ ಒಂದೆರಡು ನಿಮಿಷದ ಬಳಿಕ ಸರಿದು ಹೋಗಿತ್ತು. ಮಾಯಣ್ಣನು ಛಂಗನೆ ಎದ್ದೋಡಿ ತಾರಸಿಯ ಹಿಂದಿನ ಮೋಟು ಅಂಚುಗೋಡೆಯ ಮೇಲೆ ಇಟ್ಟ ಹೆಜ್ಜೆಯಿಂದ ಬಲವಾಗಿ ಪುಟಿದು, ಒಂದೇ ನೆಗೆತಕ್ಕೆ ನೇರವಾಗಿ ದಿನೇಶನ ಮನೆಯ ಕೋಣೆಯೊಳಕ್ಕೆ ನೆಲಮುಟ್ಟಿದ್ದ. ನಿಧಾನವಾಗಿ ಎಚ್ಚರಿಕೆಯಿಂದ ಕೋಣೆಯಿಂದ ಕೋಣೆಗೆ ಕಣ್ಣಾಯಿಸುತ್ತಾ ಮೆಟ್ಟಿಲ ಹತ್ತಿರ ಬಂದಿದ್ದ. ಜಿಜ್ಞಾಸೆಯಾಗಿತ್ತು. ಮೆಟ್ಟಿಲು ಒಂದು ಕಡೆ ಏರುತ್ತಾ ತಾರಸಿಯ ಕಡೆಗಾದರೆ ಇನ್ನೊಂದು ಕಡೆ ಇಳಿಯುತ್ತಾ ನೆಲ ಅಂತಸ್ತಿಗೆ. ನೆಲ ಅಂತಸ್ತಿನ ಕಡೆ ಇಳಿಯಲು ನಿರ್ಧರಿಸಿ ಒಂದು ಹೆಜ್ಜೆ ಕೆಳಗಿರಿಸಿದ್ದೇ ತಡ ಒಂದು ಸಮತಟ್ಟಾದ ವಸ್ತುವಿನಿಂದ ಬಲವಾಗಿ ದೂಡಲ್ಪಟ್ಟಿದ್ದ, ಎಷ್ಟು ಜೋರಾಗಿ ಅಂದರೆ ಹಿಂದಿನಿಂದ ಒಂದು ಕಾರು ಗುದ್ದಿದಂತಿತ್ತು. ಆಯತಪ್ಪಿ ಮುಗ್ಗರಿಸಿ ಉರುಳಿ ಉರುಳಿ ಕೆಳಗಿನ ಕೊನೇ ಮೆಟ್ಟಿಲಾಚೆಯ ತನಕ ಬಂದು ಬಿದ್ದಿದ್ದ ಮಾಯಣ್ಣ. ಮುಖ, ಕೈಕಾಲು, ತಲೆ, ದೇಹ ಅತ್ತಿತ್ತ ಬಡಿದು, ಸುರಿವ ಗಾಯ, ಮೂಗೇಟುಗಳಿಂದ ಜಜ್ಜಿ ಜರ್ಜರಿತನಾಗಿ, ದೃಷ್ಟಿ ಮಂದವಾಗಿ, ಅರೆಪ್ರಜ್ಞಾವಸ್ಥೆಯಲ್ಲಿದ್ದ ಮಾಯಣ್ಣನಿಗೆ, ಆ ಆಕೃತಿಯು ಮೆಲ್ಲಗೆ ಅವಸರವಿಲ್ಲದಂತೆ ತಲೆಬಾಗಿಲಿನಿಂದ ಹೊರಹೋಗಿದ್ದು ಮಸುಕು ಮಸುಕಾಗಿ ಕಂಡಿತ್ತು, ಆದರೆ ಎದ್ದು ಬೆನ್ನಟ್ಟುವ ತ್ರಾಣವಿರಲಿಲ್ಲ. ಕೊನೆಪಕ್ಷ ರಿವಾಲ್ವರ್ ಹಿಡಿದ ಕೈಯನ್ನು ಎತ್ತಿ ಗುರಿ ಹಿಡಿದು ಗುಂಡು ಚಲಾಯಿಸಲೂ ಆಗದಷ್ಟು ಮೊಣಕೈ ಗಾಸಿಯಾಗಿತ್ತು. ಎಷ್ಟೋ ಹೊತ್ತಾದ ಮೇಲೆ ಮಾಯಣ್ಣನ ಸ್ಥಿತಿ ಒಂದಷ್ಟು ತಹಬದಿಗೆ ಬಂದು, ತನ್ನ ಮೊಬೈಲ್‌ನಿಂದ ಯಾರನ್ನಾದರೂ ಕರೆಯಲು ನೋಡಿದಾಗ ತಿಳಿಯಿತು ಅದು ಜಖಂ ಆಗಿ ಸ್ಥಗಿತಗೊಂಡಿರುವುದು. ತಟ್ಟಾಡುತ್ತಾ ಹೊರಗೆ ರಸ್ತೆಗಿಳಿದು ಸಹಾಯಕ್ಕಾಗಿ ಅತ್ತಿತ್ತ ನೋಡುತ್ತಾ ಕಾದು ನಿಂತ. ಕೈಗೆ ಕಟ್ಟಿದ್ದ ಗಡಿಯಾರ ಬೆಳಗಿನ ಜಾವ ನಾಲ್ಕು ಗಂಟೆ ಎಂದು ತೋರಿತ್ತು. ಅದೇ ರಸ್ತೆಯಲ್ಲಿ ಜಾಗಿಂಗ್‌ಗೆ ಹೊರಟಿದ್ದ ಯುವಕರಿಬ್ಬರು ಮಾಯಣ್ಣನನ್ನು ನೋಡಿ ನಿಂತು ವಿಚಾರಿಸಲು ಅವರಿಗೆ ಭುಜಂಗನ ಫೋನ್ ನಂಬರ್ ಕೊಟ್ಟು ಕರೆಯಲು ಹೇಳಿದ ಮಾಯಣ್ಣ. ಸುದ್ದಿ ತಿಳಿದ ಭುಜಂಗ ಹತ್ತೇ ನಿಮಿಷದಲ್ಲಿ ಯಾರೋ ಸ್ನೇಹಿತನ ಕಾರಲ್ಲಿ ಬಂದು ತಕ್ಷಣ ಮಾಯಣ್ಣನನ್ನು ಆಸ್ಪತ್ರೆಗೆ ದಾಖಲಿಸಿದ್ದ.

ತದನಂತರ ಜೆ ಜೆ ನಗರದ ಪೊಲೀಸ್ ಠಾಣೆಯ ಸಿಬ್ಬಂದಿ, ಅತೀವ ಕಾಳಜಿಯಿಂದ ಆಸ್ಪತ್ರೆಗೆ ಬಂದು ಸುತ್ತುವರಿದು ವಿಚಾರಿಸಲು ಮಾಯಣ್ಣ ಏನನ್ನು ಬಿಟ್ಟುಕೊಡದೆ ವಿನಯ್‌ನನ್ನು ಹತ್ತಿರ ಕರೆದು ಹೇಳಿದ್ದಿಷ್ಟೆ; ತಕ್ಷಣ ಫೋರೆನ್ಸಿಕ್ ಫೋಟೊಗ್ರಾಫರ್ ರಾಜೀವ್ ಮತ್ತು ರಮಣ ಅವರನ್ನು ಕರೆದೊಯ್ದು, ಅಮ್ಮು ಮನೆಯಲ್ಲಿರುವ ಪ್ರಮುಖ ಸಾಕ್ಷಿಯಾದ ಆ ನೇಲ್ ಕಟ್ಟರ್ ಇರುವ ಜಾಗ ತಿಳಿಸಿ. ಆ ಸಾಕ್ಷಿಯ ನೈಜತೆಗೆ ಯಾವ ಧಕ್ಕೆಯೂ ಬರದಂತೆ, ವಿಧಿವಿಧಾನಗಳನುಸಾರವಾಗಿ ಸಂಗ್ರಹಿಸಿ, ಅದಕ್ಕಂಟಿರುವ ರಕ್ತವನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸುವ ವ್ಯವಸ್ಥೆ ಮಾಡಿ. ಆ ನಂತರ ಮತ್ತೆ ಅಮ್ಮು ಮನೆಗೆ ಬೀಗ ಹಾಕಿ ಸೀಲ್ ಮಾಡಿ ಅಲ್ಲಿ ಇಪ್ಪತ್ನಾಲ್ಕು ಗಂಟೆ ಕಾವಲಿಗೆ ವ್ಯವಸ್ಥೆ ಮಾಡಲು ಸೂಚನೆ ಕೊಟ್ಟಿದ್ದ. ಇತ್ತ ಆಸ್ಪತ್ರೆಯಲ್ಲಿ ಎಲ್ಲಾ ತಪಾಸಣೆಗಳ ನಂತರ, ಎಲ್ಲೂ ಮೂಳೆ ಮುರಿತವಾಗಿಲ್ಲ, ಎಲ್ಲವೂ ಹೊರಗಾಯ ಮತ್ತು ಮೂಗೇಟುಗಳಷ್ಟೇ ಎಂದು ತಿಳಿದು ಎಲ್ಲರೂ ನಿರಾಳವಾಗಿದ್ದರು. ಆಶ್ಚರ್ಯವೆಂಬಂತೆ ಅಂದು ಮಧ್ಯಾಹ್ನವೇ ಮಾಯಣ್ಣ ಅಲ್ಲಲ್ಲಿ ಗಾಯದ ಪಟ್ಟಿಗಳೊಡನೆ ಯೂನಿಫಾರ್ಮ್‌ನಲ್ಲಿ ಠೀಕುಠಾಕಾಗಿ ಏನೂ ಆಗೇ ಇಲ್ಲವೆಂಬಂತೆ ಠಾಣೆಗೆ ಬಂದಿದ್ದ. ಅಷ್ಟರಲ್ಲಿ ದಡಬಡನೆ ಬಂದ ಪೀಸಿ ಕುಮಾರ್ 'ಸಾರ್ ನಮ್ಮ ಸ್ಟೇಷನ್ನಿಗೆ ಈಗ ಇನ್ನರ್ಧ ಗಂಟೆಲಿ ಎಡಿಜಿಪಿ ಕಿಶನ್ ತ್ರಿವೇದಿ ಸಾಹೇಬರು ಬರ್ತಾರಂತೆ, ಜೊತೆಗೆ ಎಸ್‌ಪಿ ಸಾಹೇಬರು ಕೂಡ...'

'ಬರಲಿ... ಕೀಪ್ ಆಲ್ ದಿ ಡೈರೀಸ್, ಡಾಕ್ಯುಮೆಂಟ್ಸ್, ರೆಜಿಸ್ಟರ್ಸ್ ಟೈಡಿ ಅಂಡ್ ಅಪ್ ಡೇಟೆಡ್...'

'ಯೆಸ್ ಸಾರ್' (ಸಶೇಷ)